# ‘ರಾಷ್ಟ್ರೀಯ ಜಲ ನೀತಿ ಅಗತ್ಯ’

ಶನಿವಾರ • ಅಕ್ಟೋಬರ್ 17, 2015 ಪ್ರಜಾವಾಣಿ

ಮಂಗಳೂರು: ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳುವ ಮುನ್ನ ಸಮಗ್ರ ರಾಷ್ಟ್ರೀಯ ಜಲನೀತಿಯೊಂದನ್ನು ರೂಪಿಸಬೇಕು. ಅದಕ್ಕೆ ಪೂರಕವಾಗಿ ರಾಜ್ಯಗಳೂ ಜಲನಿಯಮಗಳನ್ನು ರೂಪಿಸಿಕೊಳ್ಳಬೇಕು ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿ ಡಾ. ಟಿ.ವಿ. ರಾಮಚಂದ್ರ ಹೇಳಿದರು.

ಅವರು ಸಿಟಿಝನ್ ಕೌನ್ಸಿಲ್ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಶುಕ್ರವಾರ ಎತ್ತಿನಹೊಳೆ ಯೋಜನೆಯ ಸಾಧಕ ಬಾಧಕಗಳ ಕುರಿತು ಮಾತನಾಡಿದರು. ಕೃಷ್ಣಾ, ಕಾವೇರಿ ಮತ್ತು ಮಹದಾಯಿ ನದಿಗಳಲ್ಲಿರುವ ಸಮೃದ್ಧ ನೀರನ್ನು ನಿರ್ವಹಣೆ ಮಾಡುವಲ್ಲಿ ಸರ್ಕಾರಗಳು ಸೋತಿವೆ. ಸಾಲು ಸಾಲು ಸಮಸ್ಯೆಗಳು ಹುಟ್ಟಿಕೊಂಡಿವೆ. ಆದ್ದರಿಂದ



ರಾಮಚಂದ್ರನ್

ಮೊತ್ತ ಮೊದಲು ಲಭ್ಯ ಇರುವ ನೀರನ್ನು ಸಮರ್ಪಕವಾಗಿ ನಿರ್ವಹಿಸಲು ಆಡಳಿತದಲ್ಲಿರುವ ನೇತಾರರು ಜಲನಿಯಮಗಳನ್ನು ರಚಿಸಿಕೊಂಡು ಮುಂದಿನ ಜನಾಂಗಕ್ಕೆ ನೀರನ್ನು ಉಳಿಸಬೇಕು ಎಂದು ವಿವರಿಸಿದರು.

1980ರ ದಶಕದಲ್ಲಿ ಅತ್ಯುತ್ತಮ ಜಲಾನಯನ ಯೋಜನೆಗಳನ್ನು ಜಾರಿ ಮಾಡುವ ಮೂಲಕ ದೇಶಕ್ಕೇ ಮಾದರಿಯಾಗಿದ್ದ ಕರ್ನಾಟಕ ಇಂದು ನೀರು ನಿರ್ವಹಣೆಯಲ್ಲಿ ಅತ್ಯಂತ ದುರ್ಬಲವೆನಿಸಿಕೊಂಡಿದೆ ಎಂದರು.

ಕೋಲಾರ ಮತ್ತು ಚಿಕ್ಕಬಳ್ಳಾಪುರದಲ್ಲಿ ಲಭ್ಯವಿರುವ ನೀರನ್ನು ನಿರ್ವಹಿಸಿಕೊಳ್ಳುವ ಯಾವುದೇ ಯೋಜನೆಯನ್ನು ಕೈಗೆತ್ತಿಕೊಳ್ಳದ ಸರ್ಕಾರ ಎತ್ತಿನಹೊಳೆ ಯೋಜನೆಯನ್ನು ಕೈಗೆತ್ತಿಕೊಳ್ಳಲು ಮುಂದಾಗಿದೆ. ಅವೈಜ್ಞಾನಿಕವಾದ ಎತ್ತಿನಹೊಳೆ ಯೋಜನೆ ಅನುಷ್ಠಾನವಾದರೆ ಅದು ದಖ್ಖನ್ ಪ್ರಸ್ತಭೂಮಿಯ ಸುಮಾರು 58 ನದಿಗಳ ಸಾವಿಗೆ ಕಾರಣವಾಗಬಹುದು ಎಂದರು.

**ಟಿವಿಆರ್ ಅಸಮಧಾನ:** ಪಶ್ಚಿಮ ಘಟ್ಟದ ಸೂಕ್ಷ್ಮ ಜೀವ ವೈವಿಧ್ಯ ಕುರಿತು 25 ವರ್ಷಗಳಿಗೂ ಅಧಿಕ ಕಾಲ ಅಧ್ಯಯನ ನಡೆಸುತ್ತ ಬಂದಿರುವ ತಾವು ಸಾಮಾಜಿಕ ಜವಾಬ್ದಾರಿ ಇರುವ ವಿಜ್ಞಾನಿಯಾಗಿದ್ದರಿಂದಲೇ ಎತ್ತಿನಹೊಳೆ ಯೋಜನೆಯ ಪರಿಣಾಮಗಳನ್ನು ಅಧ್ಯಯನ ಮಾಡಿರುವುದಾಗಿ ಡಾ. ಟಿ.ವಿ. ರಾಮಚಂದ್ರ ಹೇಳಿದರು. ಸಂಸದ ನಳಿನ್ ಕುಮಾರ್ ಕಟೀಲ್, ಮಾಜಿ ಸಚಿವ ನಾಗರಾಜ ಶೆಟ್ಟಿ, ತುಮಕೂರು ವಿಜ್ಞಾನ ಕೇಂದ್ರದ ಸಿ. ಯತಿರಾಜು ಮತ್ತಿತರರು ಉಪಸ್ಥಿತರಿದ್ದರು.